ವಾರದ ಪತ್ರ

## ಸ್ವರೂಪ ಬದಲಾಗಲಿ

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಕಾಮಿಡಿ ಕಿಲಾಡಿಗಳು ತುಂಬಾ ಕೀಳು ಅಭಿರುಚಿಯ ಕಾರ್ಯಕ್ರಮ. ದ್ವಂದ್ವ ಅರ್ಥ ಬರುವ ಮಾತು, ಕಳಪೆ ಆಂಗಿಕ ಭಾಷೆ, ವಿಚಿತ್ರ ವರ್ತನೆ ಇದನ್ನು ಕುಟುಂಬದ ಸದಸ್ಯರೊಂದಿಗೆ ನೋಡಲು ಅಸಹ್ಯ. ಇದನ್ನು ಕೂಡಲೇ ನಿಲ್ಲಿಸಿದರೆ ಅಥವಾ ಸ್ವರೂಪ ಬದಲಿಸಿದರೆ ವಾಹಿನಿಗೆ ಗೌರವ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಸಮಯೋಚಿತ ಕಾರ್ಯ

ಈ ವಾರ ಸರಿಗಮಪ ಕಾರ್ಯಕ್ರಮದಲ್ಲಿ ನಮ್ಮ ನೆಚ್ಚಿನ ಗಾಯಕರಾದ ಎಸ್.ಪಿ.ಬಿ. ಅವರು ಹಾಡಿದ್ದ ಗೀತೆಗಳನ್ನು ಸ್ಪರ್ಧಿಗಳು ಹಾಡಿದರು. ಅವರು ಎಂಥಾ ಒಳ್ಳೆಯ ವ್ಯಕ್ತಿತ್ವ ಹೊಂದಿದ್ದರು ಎಂಬುದು ಜನರು ಅವರಿಗೆ ತೋರಿಸುತ್ತಿರುವ ಪ್ರೀತಿಯಿಂದ ತಿಳಿಯುತ್ತಿದೆ. ಕಲಾವಿದರಿಗೆ ಸಾವಿಲ್ಲ ಎಂಬ ಮಾತು ಸತ್ಯ. ಅವರ ಜೊತೆ ಹಾಡಿದ ಅನುಭವವನ್ನು ಹಂಚಿಕೊಂಡು ಗಾಯಕ ರಾಜೇಶ್ ಕೃಷ್ಣನ್ ಭಾವುಕರಾದರು. ಹಾಗೇ ವಿಜಯ ಪ್ರಕಾಶ್, ಅರ್ಜುನ್ ಜನ್ಯ ಮತ್ತು ಮಹಾಗುರುಗಳಾದ ಹಂಸಲೇಖ, ಎಸ್.ಪಿ.ಬಿ. ಅವರನ್ನು ನೆನೆದು ದುಃಖಿತರಾದರು. ಅದನ್ನು ನೋಡುತ್ತಿದ್ದ ನಮಗೂ ಅರಿವಿಲ್ಲದಂತೆ ಕಣ್ಣೀರು ಬಂತು. ಒಟ್ಟಿನಲ್ಲಿ ಈ ವಾರದ ಸರಿಗಮಪ ಈ ಮೂಲಕ ಗಾನ ಗಂಧರ್ವ ಎಸ್.ಪಿ.ಬಿ. ಅವರಿಗೆ ಗೌರವ ಸಲ್ಲಿಸಿದ್ದು ಸಮಯೋಚಿತವಾಗಿತ್ತು.

—ಕೆ.ಎಸ್. ಸವಿತ, ಬೆಂಗಳೂರು

## ಸಾಮಾಜಿಕ ಹೊಣೆಗಾರಿಕೆ ಬೇಕು

ದಿನಗಳೆದಂತೆ ಕೊರೊನಾ ಪಿಡುಗು ಹೆಚ್ಚಳವಾಗುತ್ತಿದೆ. ಲಾಕ್‌ಡೌನ್ ಸಡಿಲಿಕೆ, ಸೋಂಕಿನತ್ತ ಈಗೀಗ ನಾವು ತೋರುವ ನಿರ್ಲಕ್ಷ್ಯ, ಹೊರಹೋದಾಗ ಮಾಸ್ಕ್ ಧರಿಸದೆ ಇರುವುದು, ಸಾಮಾಜಿಕ ಅಂತರ ಪಾಲಿಸದೆ ಇರುವುದು, ಕೊರೊನಾ ಇಲ್ಲವೇ ಇಲ್ಲ; ಬರೇ ಬೊಗಳೆ ಎನ್ನುವ ಕೆಲವರ ತಲೆಬುಡವಿಲ್ಲದ ವಾದ ಎಲ್ಲವೂ ಸೇರಿ ಈ ಹೆಮ್ಮಾರಿಯನ್ನು ಬೇಕಾಬಿಟ್ಟಿ ಹಬ್ಬಲು ಬಿಟ್ಟಿದ್ದರಲ್ಲಿ ಎರಡು ಮಾತಿಲ್ಲ.

ಕೊರೊನಾ ವಿರುದ್ಧ ಹೊರಾಡುವ ವಾರಿಯರ್ಸ್ ಬವಣೆಗಳನ್ನು ಸಂಕ್ಷಿಪ್ತವಾಗಿ ದಿನಕ್ಕೆ ಐದಾರು ಸಲವಾದರೂ ಅಚ್ಚುಕಟ್ಟಾಗಿ, ಮನಮುಟ್ಟುವಂತೆ ದೃಶ್ಯಮಾಧ್ಯಮಗಳು ಬಿತ್ತರಿಸಿದರೆ ಜನಮನದಲ್ಲಿ ಪ್ರಭಾವ ಬೀರೀತು. ಮರೆತ ನಮ್ಮ ಜವಾಬ್ದಾರಿಯನ್ನು ಎಚ್ಚರಿಸಿದಂತೆಯೂ ಆದೀತು. ಎಚ್ಚರಿಕೆಯ ಗಂಟೆ ಸದಾ ಮೊಳಗುತ್ತಿದ್ದರೆ ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ ಎನ್ನುವ ಸದಾಶಯಕ್ಕೆ ಬಲ ಬಂದೀತು.

—ಧರ್ಮಾನಂದ ಶಿರ್ವ, ಬೆಂಗಳೂರು

## ಎದೆ ತುಂಬಿ... ಮರುಪ್ರಸಾರವಾಗಲಿ

ಗಾನಮಾಧುರ್ಯ ಎಸ್.ಪಿ. ಬಾಲಸುಬ್ರಹ್ಮಣ್ಯಂ ಭೌತಿಕವಾಗಿ ಇಂದು ನಮ್ಮ ಜೊತೆ ಇಲ್ಲದಿದ್ದರೂ, ಅವರು ಹಾಡಿರುವ ನಲವತ್ತು ಸಾವಿರ ಹಾಡುಗಳನ್ನು ನೀಡುವ ಮೂಲಕ ನಮ್ಮ ಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಚಲನಚಿತ್ರ ಗೀತೆಗಳನ್ನು ಅಲ್ಲದೆ ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆಗಳ ಇವರ ಹಾಡಿನ ಮಾಧುರ್ಯಕ್ಕೆ ಮನಸೋಲದವರು ಯಾರು? ಕಿರುತೆರೆಗಳ ವಿವಿಧ ಕಾರ್ಯಕ್ರಮಗಳಲ್ಲಿ ತೀರ್ಪುಗಾರರಾಗಿ ಒಂದಲ್ಲ ಒಂದು ರೀತಿಯಲ್ಲಿ ಭಾಗವಹಿಸಿದ್ದಾರೆ. ಕನ್ನಡಿಗರನ್ನು ಮೀರಿಸುವ ಹೃದಯಸ್ಪರ್ಶಿ ಮಾತುಗಳನ್ನು ಆಡಿ ಹೃದಯ ಗೆದ್ದಿದ್ದಾರೆ. ಅದರಲ್ಲೂ ಅಂದಿನ ಈ ಟೀವಿಯ 'ಎದೆ ತುಂಬಿ ಹಾಡುವೆನು' ಮೂಲಕ ರಾಜ್ಯದ ಮೂಲೆ ಮೂಲೆಯನ್ನು ತಲುಪಿದ್ದಾರೆ. ನೂರಾರು ಯುವ ಗಾಯಕಗಾಯಕಿಯರನ್ನು ಪ್ರೋತ್ಸಾಹಿಸಿದ್ದಾರೆ. ಗಾಯಕರಿಗೆ ಹೇಳುತ್ತಿದ್ದ ತಮ್ಮ ಅನುಭವದ ಮಾತುಗಳು. ಸ್ಪರ್ಧೆಯಲ್ಲಿ ಸೋತರೂ ಕೂಡ ಸಂತೋಷ ಕೊಡುತ್ತಿತ್ತು. ಮತ್ತವಲ್ಲ, ಮುಂದಿನ ಸ್ಪರ್ಧೆಗೆ ಅವರನ್ನು ಹುರಿದುಂಬಿಸುತ್ತಿದ್ದರು. ಇಂತಹ ಜನಪ್ರಿಯ 'ಎದೆ ತುಂಬಿ ಹಾಡುವೆನು' ಯಾರಾದರೂ ಮರುಪ್ರಸಾರ ಮಾಡಿದರೆ ಚೆನ್ನಾಗಿರುತ್ತದೆ.

—ಕಾಳಿಹುಂಡಿ ಶಿವಕುಮಾರ್, ಮೈಸೂರು

## ವಿನೂತನ ಪ್ರಯೋಗ

ಕಲರ್ಸ್ ಕನ್ನಡದಲ್ಲಿ ಮೂಡಿ ಬರುತ್ತಿರುವ 'ಕನ್ನಡತಿ' ವಿಶಿಷ್ಟವಾಗಿದೆ. ವಿಭಿನ್ನ ಪ್ರಯೋಗದೊಂದಿಗೆ ಈ ಧಾರಾವಾಹಿಯ ಪ್ರತಿಕಂತಿನ ಕೊನೆಯಲ್ಲಿ 'ಸರಿಗನ್ನಡಂಗೆಲ್ಗೆ' ನಾಮಾಕಿಂತದೊಂದಿಗೆ ಕನ್ನಡದ ಪದ ಭಾಷಾಜ್ಞಾನವನ್ನು ಹೆಚ್ಚಿಸುವ ಪ್ರಯೋಗ ನಿಜಕ್ಕೂ ಪ್ರಶಂಸನೀಯ. ಕನ್ನಡ ಭಾಷೆಯ ಪದದ ಅರ್ಥವನ್ನು ತಿಳಿಸುವ ಈ ಒಂದು ವಿನೂತನ ಪ್ರಯೋಗಕ್ಕೆ ಪ್ರತಿಯೊಬ್ಬ ಕನ್ನಡಿಗರು ಹೆಮ್ಮೆಪಡಬೇಕು.

—ರಾಂಚಂದ್ರಕೊಪ್ಪಲು, ತೀರ್ಥಹಳ್ಳಿ

## ಅಂಕಲ್ ಬೇರೆ ಕೇಡು?

ಕಲರ್ಸ್ ಕನ್ನಡದ 'ಗೀತಾ'ದಲ್ಲಿ ನಾಯಕಿ ಗೀತಾ ಗಂಡ ಅನ್ನಿಸಿಕೊಂಡವನನ್ನು ಲೋ, ಹೋಗೋಬಾರೋ ಎನ್ನುತ್ತಾಳೆ. ಅವನ ಯೋಗ್ಯತೆಗೆ ಅದು ಸರಿಯಾಗಿಯೇ ಇದೆ. ಆದರೆ ಮನೆಯಲ್ಲಿರುವ ಎಂಎಲ್ಎ ಸಾಹೇಬರ ಹೆಂಡತಿ ಹಾಗೂ ಅವಳ ಅಣ್ಣನಿಗೆ ಅಂಕಲ್ ಎಂಬ ಪದ ನಿಜಕ್ಕೂ ಹೇಸಿಗೆ ಬರುವಂತೆ ಮಾಡುತ್ತದೆ. ಹಾಸ್ಯ ಚೆನ್ನಾಗಿ ಮಾಡುತ್ತಾನೆ ಎಂದ ಮಾತ್ರಕ್ಕೆ ಅವನೇನೂ ಒಳ್ಳೆಯವನಲ್ಲ. ಅವನಿಗೂ ಅವನ ಅಕ್ಕನಿಗೂ ಮನುಷ್ಯತ್ವ ಎಂಬುದೇ ಇಲ್ಲ. ನೂರಾರು ಜನರಿಗೆ ಗೀತಾ ಊಟದ ವ್ಯವಸ್ಥೆ ಮಾಡಿದ್ದರೆ ಅವಳಿಗೆ ಕಳಂಕ ಬರಲೆಂದು ಆ ಊಟಕ್ಕೆ ವಿಷ ಹಾಕುವುದು ಸಮಾಜಕ್ಕೆ ಇವರು ನೀಡುವ ಕೊಡುಗೆ. ಎಂತಹ ನೀಚ ಪ್ರವೃತ್ತಿ ಅನಿಸುತ್ತದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಭಾಷೆ ತಿದ್ದಿ

ನಮ್ಮ ಧಾರಾವಾಹಿಗಳ ಮತ್ತು ಹಾಸ್ಯ ಶೋಗಳ ಬಗ್ಗೆ ಎಷ್ಟೇ ಬರೆದರೂ ಕಮ್ಮಿಯೇ. ಏನು ಭಾಷೆ, ಕಥಾ ತಿರುವುಗಳು! ಯಾವುದೇ ಪತ್ತೇದಾರಿ ಕಾದಂಬರಿ ಬರಹಗಾರರೂ ನಾಚುವಂತಿರುತ್ತದೆ. ಇಲ್ಲಿ ಮತ್ತೆ ಮತ್ತೆ ಪಾತ್ರಧಾರಿಗಳ ಕನ್ನಡ ಉಚ್ಚಾರಣೆ ಅಯ್ಯೋ ಕನ್ನಡವೇ ಎನಿಸುತ್ತದೆ. ಇನ್ನೇನು ನವೆಂಬರ್ ಬಂತು. ಆ ನೆಪದಲ್ಲಾದರೂ ಭಾಷೆಯಲ್ಲಿ ಸುಧಾರಣೆಯನ್ನು ತರಲಿ ಎಂದು ಆಶಿಸುತ್ತೇನೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು



## ಮೇರು ವ್ಯಕ್ತಿತ್ವ

ಮಹಾನ್ ಗಾಯಕ, ನಟ, ನಿರ್ಮಾಪಕ ಎಸ್.ಪಿ.ಬಿ. ಅವರ ಬಗ್ಗೆ ಅರಿವು ಮೂಡಿಸಿದ ಚಾನಲ್‌ಗಳಿಗೆ ಧನ್ಯವಾದಗಳು. ಗಾಯನ ಮಾತ್ರವಲ್ಲದೆ ತೆರೆಮರೆಯಲ್ಲಿ ಅವರು ಮಾಡುತ್ತಿದ್ದ ಸಹಾಯ ಮನ ಮಿಡಿಯುವಂತಿತ್ತು. ಇಂತಹ ಭಾವನಾಲೋಕದ ಉತ್ತುಂಗದಲ್ಲಿದ್ದ ನಮ್ಮನ್ನು ಅವರ ಅಗಲಿಕೆ ಒಂದೇ ಬಾರಿಗೆ ಕೆಳಗೆ ನೂಕಿತ್ತು. ಮೃಷ್ಟಾನ್ನ ಭೋಜನದ ಮಧ್ಯೆ ಕಹಿ ಪದಾರ್ಥವನ್ನು ಬಡಿಸಿಬಿಟ್ಟಿತು. ಇನ್ನೂ ಅದನ್ನು ನಮ್ಮಿಂದ ಅರಗಿಸಿಕೊಳ್ಳಲಾಗುತ್ತಿಲ್ಲ. ನಮಗೆ ಗೊತ್ತಿಲ್ಲದ ಅವರ ದುಶ್ಚಟಗಳ ಬಗ್ಗೆ ವರದಿ ಮಾಡಿದ್ದು ಬೇಸರವನ್ನುಂಟುಮಾಡಿತ್ತು. ಮನುಷ್ಯ ಅಂದಮೇಲೆ ಕೆಲವರಿಗೆ ಕೆಲ ಹವ್ಯಾಸಗಳಿರುತ್ತವೆ. ಆದರೆ ಈ ಸಮಯದಲ್ಲಿ ಇಂಥ ಅಪ್ರಿಯವಾದುದನ್ನು ತಿಳಿಸಿ ನಮ್ಮ ಭಾವನೆ ಘಾಸಿ ಮಾಡಿದ್ದು ಸರಿಯಲ್ಲವೇನೋ ಎಂದು ಅನ್ನಿಸಿತು.

—ಪುಷ್ಪಾ ಎನ್.ಕೆ. ರಾವ್ ಉಡುಪಿ